# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕಿನ ಮದಭಾವಿ ಮತ್ತು ಇತರೆ 18 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯಿಂದ(MVS) **ಮದಭಾವಿ ಗ್ರಾಮದ 1422 ಮನೆಗಳಿಗೆ** ಕಾರ್ಯಾತ್ಮಕ ನಳ ನೀರು ಸಂಪರ್ಕ **(FHTC)** ಕಲ್ಪಿಸುವ Augmentation ಮತ್ತು Retrofitting ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:**
1. ದಿನಾಂಕ:08.12.2021ರಂದು ನಡೆದ Apex Committee ಸಭೆಯ ನಡವಳಿಗಳು.
2. ಮುಖ್ಯ ಅಭಿಯಂತರರು, ಗ್ರಾ.ಕು.ನೀ.&ನೈ. ಇಲಾಖೆ ಇವರ ಕಡತ ಸಂ:ಗ್ರಾಕುನೀ&ನೈಇ/ಮುಇಂ/ತಾಂತ್ರಿಕ/181/2022

-----

**ಪೀಠಿಕೆ:**

ಕೇಂದ್ರ ಸರ್ಕಾರದ ಜಲ ಜೀವನ ಮಿಷನ್ (JJM) ಕಾರ್ಯಕ್ರಮದಡಿಯಲ್ಲಿ ರಾಜ್ಯದ ಎಲ್ಲಾ ಗ್ರಾಮೀಣ ಜನವಸತಿಗಳಿಗೆ 2023ರೊಳಗಾಗಿ ಕಾರ್ಯಾತ್ಮಕ ನಳ ನೀರು ಸಂಪರ್ಕವನ್ನು ಕಲ್ಪಿಸಬೇಕಾಗಿರುತ್ತದೆ.

ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕಿನ ಮದಭಾವಿ ಮತ್ತು ಇತರೆ 18 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯಿಂದ(MVS) **ಮದಭಾವಿ ಗ್ರಾಮದ 1422 ಮನೆಗಳಿಗೆ** ಕಾರ್ಯಾತ್ಮಕ ನಳ ನೀರು ಸಂಪರ್ಕ **(FHTC)** ಕಲ್ಪಿಸುವ Augmentation ಮತ್ತು Retrofitting ಕಾರ್ಯಕ್ರಮವನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು 2021-22ನೇ ಸಾಲಿನ ಜೆ.ಜೆ.ಎಂ. ಪರಿಷ್ಕೃತ ಕ್ರಿಯಾಯೋಜನೆಯಲ್ಲಿ ಪರಿಗಣಿಸಲಾಗಿದ್ದು, ದಿನಾಂಕ:08.12.2021ರಂದು ನಡೆದ Apex Committee ಸಭೆಯಲ್ಲಿ ಕ್ರಿಯಾ ಯೋಜನೆಗೆ ಅನುಮೋದನೆ ದೊರಕಿರುತ್ತದೆ. ಕಾಮಗಾರಿಯ ಅಂದಾಜು ಮೊತ್ತ **ರೂ.394.00ಲಕ್ಷಗಳಿಗೆ** ಮೇಲೆ ಓದಲಾದ(2)ರಲ್ಲಿ ಮುಖ್ಯ ಅಭಿಯಂತರರು, ಗ್ರಾ.ಕು.ನೀ.&ನೈ. ಇಲಾಖೆ, ಬೆಂಗಳೂರು ಇವರು ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಚಾಲ್ತಿ ಪಾರದರ್ಶಕ ನೀತಿಯನ್ವಯ ನಿಯಮಾನುಸಾರ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್, **ಬೆಳಗಾವಿ** ಹಾಗೂ ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರುರವರು ಮುಂದಿನ ಪ್ರಕ್ರಿಯೆಯನ್ನು ಅನುಸರಿಸಲು ಅನುವಾಗುವಂತೆ ಜಲ ಜೀವನ ಮಿಷನ್ (JJM) ಕಾರ್ಯಕ್ರಮದ ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಬೇಕಾಗಿದೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂ: ಗ್ರಾಕುನೀ&ನೈಇ/325/ಗ್ರಾನೀಸ(4)/2022 ಬೆಂಗಳೂರು ದಿನಾಂಕ:24.06.2022** 1845

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕಿನ ಮದಭಾವಿ ಮತ್ತು ಇತರೆ 18 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯಿಂದ(MVS) **ಮದಭಾವಿ ಗ್ರಾಮದ 1422 ಮನೆಗಳಿಗೆ** ಕಾರ್ಯಾತ್ಮಕ ನಳ ನೀರು ಸಂಪರ್ಕ **(FHTC)** ಕಲ್ಪಿಸುವ Augmentation ಮತ್ತು Retrofitting ಕಾಮಗಾರಿಯ ಅಂದಾಜು ಮೊತ್ತ **ರೂ394.00ಲಕ್ಷ (ಮೂರು ನೂರ ತೊಂಭತ್ತಾಲ್ಕು ಲಕ್ಷ ರೂಪಾಯಿಗಳು ಮಾತ್ರ)** ಗಳಿಗೆ ಈ ಆದೇಶಕ್ಕೆ ಲಗತ್ತಿಸಿರುವ ಘೋಷ್ವಾರೆಯನ್ವಯ **ಜಲ ಜೀವನ ಮಿಷನ್ (JJM) ಕಾರ್ಯಕ್ರಮದಡಿ** ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

**2. ಈ ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ವಿನಿಯೋಗ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ:**

1. Retrofitting ಕಾಮಗಾರಿಗಳಿಗೆ ಪ್ರತಿ ಮನೆಗೆ ಅಂದಾಜು ಮೊತ್ತ ರೂ.15000/- ಮೀರಿದ ಹಾಗೂ Augmentation ಕಾಮಗಾರಿಗಳಿಗೆ ಅವಶ್ಯಕತೆಗೆ ಅನುಗುಣವಾಗಿ Components ಗಳನ್ನು ಪರಿಗಣಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು ಟೆಂಡರ್ ಕರೆಯುವ ಪೂರ್ವದಲ್ಲಿ ಅಧೀಕ್ಷಕ ಅಭಿಯಂತರರಿಂದ ತಾಂತ್ರಿಕ ಪರಿಶೀಲನೆ ಮಾಡಿಕೊಂಡು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸೂಚಿಸಿದೆ.
2. ಕಾಮಗಾರಿಯನ್ನು ಪ್ರಾರಂಭಿಸುವ ಮುನ್ನ 15ನೇ ಹಣಕಾಸಿನಡಿ ಅಂದಾಜು ಮೊತ್ತದ 15% ಹಾಗೂ ಸಮುದಾಯ ವಂತಿಕೆಯ ಅಂದಾಜು ಮೊತ್ತದ 10% ಸಂಗ್ರಹವಾಗಿರುವ ಬಗ್ಗೆ ಖಾತರಿಪಡಿಸಿಕೊಳ್ಳತಕ್ಕದ್ದು.
3. ಕಾಮಗಾರಿಯ ಅನುಷ್ಠಾನದಲ್ಲಿ ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳತಕ್ಕದ್ದು ಹಾಗೂ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ ಕಾರ್ಯಗತಗೊಳಿಸಬೇಕು.
4. ಸದರಿ ಅನುದಾನವನ್ನು ಕರ್ನಾಟಕ ಪಾರದರ್ಶಕ ಕಾಯ್ದೆ-1993 ಮತ್ತು ಕರ್ನಾಟಕ ಪಾರದರ್ಶಕ ನಿಯಮಗಳು-2000, ಕರ್ನಾಟಕ ಆರ್ಥಿಕ ಸಂಹಿತೆ-1958 ಹಾಗೂ ಚಾಲ್ತಿ ನಿಯಮಗಳನ್ನು ಅನುಸರಿಸತಕ್ಕದ್ದು.
5. ಕಾಮಗಾರಿಯ ಅನುಷ್ಠಾನದಲ್ಲಿ ಯಾವುದೇ ಬದಲಾವಣೆ ಮಾಡಬೇಕಾದ್ದಲ್ಲಿ ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆರವರಿಂದ ಒಪ್ಪಿಗೆ ಪಡೆಯತಕ್ಕದ್ದು.
6. ಕಾಮಗಾರಿಗೆ ನಿಗದಿಪಡಿಸಿದ ಅನುದಾನವನ್ನು ಬೇರೆ ಕಾಮಗಾರಿಗೆ ಅಥವಾ ಯೋಜನೆಗೆ ವರ್ಗಾಯಿಸತಕ್ಕದ್ದಲ್ಲ.
7. ಕಾಮಗಾರಿಯ ಅನುಷ್ಠಾನದ ಮೂರು ಹಂತದ GPS ಛಾಯಾ ಚಿತ್ರಗಳನ್ನು ತೆಗೆದು ನಿರ್ವಹಿಸತಕ್ಕದ್ದು.
8. ಕಾಮಗಾರಿ ಪ್ರಾರಂಭಿಸುವ ಪೂರ್ವದಲ್ಲಿ ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&ನೈ ವೃತ್ತ, ಬೆಳಗಾವಿ ರವರು ಅಂದಾಜಿನಲ್ಲಿ ಅಳವಡಿಸಿರುವ ಅಂಶಗಳನ್ನು ಹಾಗೂ ವಿನ್ಯಾಸಗಳನ್ನು ಪರಿಶೀಲಿಸಿ, ಏಕ ರೂಪ ದರಪಟ್ಟಿಯನ್ವಯ ತಾಂತ್ರಿಕ ಮಂಜೂರಾತಿ ನೀಡತಕ್ಕದ್ದು.
9. ಎಲ್ಲಾ ತಾಂತ್ರಿಕ ಅಂಶಗಳನ್ನು JJM ಮಾರ್ಗಸೂಚಿಗಳನ್ವಯ ಪರಿಶೀಲಿಸಿದ ನಂತರ ತಾಂತ್ರಿಕ ಮಂಜೂರಾತಿ ನೀಡತಕ್ಕದ್ದು.
10. ತಾಂತ್ರಿಕ ಮಂಜೂರಾತಿ ನೀಡುವ ಮುನ್ನ ಕಾಮಗಾರಿಯ ಜಲಮೂಲದ ಸುಸ್ಥಿರತೆ ಬಗ್ಗೆ Source Finding Committee ಮೂಲಕ ಖಾತರಿಪಡಿಸಿಕೊಳ್ಳತಕ್ಕದ್ದು.
11. ಕಾಮಗಾರಿಯಲ್ಲಿ ಪರಿಗಣಿಸಿರುವ ಪ್ರಾಕ್ಷೇಪಿತ ಜನಸಂಖ್ಯೆ (Decadal Growth Rate) ಬಗ್ಗೆ ಪರಿಶೀಲಿಸಿದ ನಂತರ ತಾಂತ್ರಿಕ ಮಂಜೂರಾತಿ ನೀಡಲು ಕ್ರಮವಹಿಸತಕ್ಕದ್ದು.
12. ಈ ಆದೇಶದಡಿ ಅನುಮೋದನೆಯಾದ ಯೋಜನೆಗೆ ಅಂದಾಜು ಮೊತ್ತದ ವ್ಯಾಪ್ತಿಯೊಳಗೆ ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&ನೈ ವೃತ್ತ ಕಛೇರಿಯವರಿಂದ ದೃಢೀಕರಿಸಿದ ತಾಂತ್ರಿಕ ಅನುಮೋದನೆಯನ್ವಯ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು IMISನಡಿ ದಾಖಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

28/6/22

ನಿರ್ದೇಶಕರು,
ಹಾಗೂ ಪದನಿಮಿತ್ತ ಉಪ ಕಾರ್ಯದರ್ಶಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ –AG/A&E) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು–I – G&SSA- AUDIT) ಕರ್ನಾಟಕ, ಬೆಂಗಳೂರು.
3. ಅಧ್ಯಕ್ಷರು, ಜಿಲ್ಲಾ ಪಂಚಾಯತ್, **ಬೆಳಗಾವಿ.**

4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಮುಖ್ಯ ಅಭಿಯಂತರರು, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
7. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು
8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, **ಬೆಳಗಾವಿ.**
9. ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&.ನೈ. ವೃತ್ತ ಕಛೇರಿ, **ಬೆಳಗಾವಿ.**
10. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
11. ಸಂಪಾದಕರು,"ಕರ್ನಾಟಕ ವಿಕಾಸ", ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
12. ಮುಖ್ಯ ಲೆಕ್ಕಾಧಿಕಾರಿ, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು.
13. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗ, **ಚಿಕ್ಕೋಡಿ.**
14. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು) ಬಹುಮಹಡಿ ಕಟ್ಟಡ, ಬೆಂಗಳೂರು.
15. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ) ಬೆಂಗಳೂರು.
16. ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು), ಬಹುಮಹಡಿ ಕಟ್ಟಡ ಬೆಂಗಳೂರು.
17. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಪತ್ರ ಸಂಖ್ಯೆ: ಗ್ರಾಕುನೀಸನೈಇ/323/ಗ್ರಾಕುನೀಸ(4)/2022 ಬೆಂಗಳೂರು ದಿನಾಂಕ: 24.06.2022 ರ ಪತ್ರ

DETAILED ESTIMATE

Providing FHTCs to ~~1687~~ 1422 Households in Madabhavi Village Athani Taluka Belagavi District Through MVS to Madabhavi and Other 18 Villages in Belagavi District.

ABSTRACT OF ESTIMATE

| Sl. No. | Name of sub Works | Amount (In Rs.) |
|---|---|---|
| I | PART -A | |
| 2 | Detailed Estimate of ELSR 25 KL 12m Staging Height | 10,02,875.00 |
| 3 | Detailed Estimate for Bulk Flow Meter (1 Nos) | 89,110.00 |
| | Sub total of Part -A | 10,91,985.00 |
| | Add 12% GST | 1,31,038.20 |
| | Total of Part -A | 12,23,024.00 |
| | | |
| II | PART -B (Distribution System With F.H.T.C) | |
| 1 | Distribution Pipe Network - 34564 Rmt | 1,94,13,289.00 |
| 2 | Functional Household Tap Connection (F.H.T.C) - 1422 Nos | 98,71,242.00 |
| 3 | Retrofiting to existing tap connection from HHC to FHTC's - 388 Nos | 27,16,389.00 |
| | Sub Total Part -B | 3,20,00,920.00 |
| | Add 12% GST | 38,40,110.40 |
| | Total of Part -B | 3,58,41,031.00 |
| | Total cost of Part -A & B | 3,70,64,055.00 |
| | Third party inspection 0.5% + Preparation DPR 0.72% | 4,03,733.44 |
| | add 18% GST | 72,672.02 |
| | Tender Premium - 5% | 16,54,645.25 |
| | Add for other Expenditure & Miscellaneous | 2,04,894.29 |
| | Grand Total | 3,94,00,000.00 |
| | Amount in Lakh | 394.00 |

Assistant Executive Engineer
RDW & S Sub Division Athani

Executive Engineer
RDW & S Division Chikkodi

"ಅನುಮೋದಿಸಿದೆ"

Director
Rural Drinking Water & Sanitation Dept. &
Ex-Officio Deputy Secretary
Rural Development & Panchayath Raj Dept.
30/6/22

Superintending Engineer
Rural Drinking Water and Sanitation
Circle Belgaum

ಮುಖ್ಯ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
1ನೇ ಮಹಡಿ, 'ಇ' ಬ್ಲಾಕ್, ಕೆಹೆಚ್‌ಬಿ ಆವರಣ, ಕಾವೇರಿ ಭವನ,
ಕೆ.ಜಿ. ರಸ್ತೆ, ಬೆಂಗಳೂರು-9